## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 1075 |
| ಸದಸ್ಯರ ಹೆಸರು | :ಶ್ರೀ ಅರವಿಂದ ಕುಮಾರ್ ಅರಳಿ(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : 21.09.2021 |
| ಉತ್ತರಿಸುವ ಸಚಿವರು | :ಮಾನ್ಯ ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖಾ ಸಚಿವರು. |

<table>
<tr><th>ಕ್ರಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಬೀದರ್ ಜಿಲ್ಲೆಯಲ್ಲಿ ಒನ್ ಸ್ಟಾಪ್ ಕೇಂದ್ರ ಮತ್ತು ಬೀದರ್ ಮಹಿಳಾ ನಿರ್ಭಯ ಸಹಾಯವಾಣಿ ಕೇಂದ್ರಗಳು ಜಿಲ್ಲೆಯಲ್ಲಿ ಚಾಲ್ತಿಯಲ್ಲಿವೆಯೇ; ಅವು ಯಾವುವು; (ಸಂಸ್ಥೆ ಹೆಸರು ಮತ್ತು ವಿಳಾಸ ನೀಡುವುದು)</td><td>ಚಾಲ್ತಿಯಲ್ಲಿರುತ್ತದೆ.<br><br>ಒನ್ ಸ್ಟಾಪ್ ಕೇಂದ್ರದ ವಿಳಾಸ: ಜಿಲ್ಲಾ ಆಸ್ಪತ್ರೆ, ಬ್ರಿಮ್ಸ್, ಬೀದರ್.<br><br>ಯೂನಿವರ್ಸಲೈಸೇಷನ್ ಆಫ್ ವುಮೆನ್ ಹೆಲ್ಪ್‌ಲೈನ್ ಸಂಖ್ಯೆ:181 ಮಹಿಳೆಯರಿಗೆ ಮಾಹಿತಿಯನ್ನು ನೀಡಲು ಹಾಗೂ ದೌರ್ಜನ್ಯ ಮತ್ತು ಸಂಕಷ್ಟದಲ್ಲಿರುವ ಮಹಿಳೆಯರಿಗೆ ತುರ್ತು ನೆರವನ್ನು ಒಂದೇ ಸೂರಿನಡಿ ಒದಗಿಸುವ ನಿಟ್ಟಿನಲ್ಲಿ ಯೂನಿವರ್ಸಲೈಸೇಷನ್ ಆಫ್ ವುಮೆನ್ ಹೆಲ್ಪ್‌ಲೈನ್ ಸಂಖ್ಯೆ:181 ಎಂಬ ಉಚಿತ ದೂರವಾಣಿ ಸೇವೆಯನ್ನು 24*7 ರಾಜ್ಯಾದ್ಯಂತ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಹಭಾಗಿತ್ವದೊಂದಿಗೆ ಜಾರಿಗೊಳಿಸಲಾಗುತ್ತಿದೆ.</td></tr>
<tr><td>ಆ)</td><td>2018-19 ರಿಂದ 2020-21ನೇ ಸಾಲಿನವರೆಗೆ ಸರ್ಕಾರದಿಂದ ಬಿಡುಗಡೆಯಾದ ಅನುದಾನವೆಷ್ಟು; ಬಳಕೆಯಾದ, ಬಳಕೆಯಾಗದ ಅನುದಾನವೆಷ್ಟು; (ವಿವರವಾದ ಮಾಹಿತಿ ಒದಗಿಸುವುದು)</td><td>ಸಖಿ-ಒನ್ ಸ್ಟಾಪ್ ಸೆಂಟರ್ ಯೋಜನೆಗೆ ಸಂಬಂಧಿಸಿದಂತೆ ಅನುದಾನದ ವಿವರ: (ರೂ.ಲಕ್ಷಗಳಲ್ಲಿ)<br><table><tr><th>ವರ್ಷ</th><th>ಬಿಡುಗಡೆ</th><th>ಬಳಕೆ</th><th>ಉಳಿಕೆ</th></tr><tr><td>2018-19</td><td colspan="3">ಸಖಿ-ಕೇಂದ್ರ ಪ್ರಾರಂಭವಾಗಿರುವುದಿಲ್ಲ</td></tr><tr><td>2019-20</td><td>43.76</td><td>3.02</td><td>40.73</td></tr><tr><td>2020-21</td><td>21.00</td><td>14.97</td><td>6.03</td></tr></table></td></tr>
<tr><td>ಇ)</td><td>ಇಷ್ಟು ಅನುದಾನ ವೆಚ್ಚವಾದಲ್ಲಿ ಈ ಕೇಂದ್ರಗಳಿಂದ ಇಲ್ಲಿಯವರೆಗೆ ಎಷ್ಟು ಮಹಿಳೆಯರಿಗೆ ಸಾಂತ್ವನ ನೀಡಲಾಗಿದೆ? (ಕೇಂದ್ರವಾರು ಮಾಹಿತಿ ಒದಗಿಸುವುದು)</td><td>ಈ ಯೋಜನೆಯು ದೌರ್ಜನ್ಯಕ್ಕೊಳಗಾದ ಮಹಿಳೆಯರಿಗೆ ಒಂದೇ ಸೂರಿನಡಿ ಎಲ್ಲಾ ಸೇವೆಗಳನ್ನು ಒದಗಿಸುವ ಕೇಂದ್ರವಾಗಿದ್ದು, ವೈದ್ಯಕೀಯ ಚಿಕಿತ್ಸೆ, ಪೊಲೀಸ್ ನೆರವು, ಕಾನೂನು ನೆರವು, ಸಮಾಲೋಚನೆ ಮತ್ತು ತಾತ್ಕಾಲಿಕ ಆಶ್ರಯ ನೀಡಲಾಗುತ್ತಿದೆ. ಆಗಸ್ಟ್-2021ರ ಅಂತ್ಯದವರೆಗೆ ಬೀದರ್ ಒ.ಎಸ್.ಸಿ ಕೇಂದ್ರದಲ್ಲಿ ಒಟ್ಟು 76 ಮಹಿಳೆಯರಿಗೆ ಸೌಲಭ್ಯ ನೀಡಲಾಗಿದೆ.</td></tr>
</table>

ಸಂ: ಮಮಇ 87 ಮಮಅ 2021

(ಆಚಾರ ಹಾಲಪ್ಪ ಬಸಪ್ಪ)
ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು
ಮಕ್ಕಳ ಅಭಿವೃದ್ಧಿ ವಿಕಲಚೇತನರ ಹಾಗೂ
ಹಿರಿಯ ನಾಗರೀಕರ ಸಬಲೀಕರಣ ಸಚಿವರು.